ವಿಷಯ :- ಅಗ್ನಿಶಾಮಕ ಸೇವೆ ಸಿಬ್ಬಂದಿಗೆ ಸೌಲಭ್ಯ :

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 972 (1149)

ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ) :- ಮಾನ್ಯ ಸೆರೆಮನೆ, ಗೃಹ ರಕ್ಷಕ ದಳ ಹಾಗೂ ಅಗ್ನಿಶಾಮಕ ಸೇವೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಅಗ್ನಿಶಾಮಕ ಸೇವಾ ಸಿಬ್ಬಂದಿಗೆ ಮೂರು ಪಾಳಿಯ ಸೇವೆ ಎಂದಿನಿಂದ ಜಾರಿ ಮಾಡಲಾಯಿತು. 1993-94, 1994-95 ಹಾಗೂ 1995-96 ನೇ ಸಾಲಿನಲ್ಲಿ ಎಷ್ಟು ಅಗ್ನಿಶಾಮಕ ಠಾಣೆಗಳಿಗೆ ಮೂರು ಪಾಳಿಗೆ ಹೆಚ್ಚಿನ ಸಿಬ್ಬಂದಿ ಮಂಜೂರಾತಿ ಮಾಡಿದೆ?

ಆ) ಪೋಲೀಸ್ ಇಲಾಖೆಯ ನೌಕರರಿಗೆ ನೀಡಿರುವ ಸೌಲಭ್ಯವನ್ನು ಅಗ್ನಿಶಾಮಕ ಸೇವೆ ನೌಕರರಿಗೆ ಉಚಿತ ಧಾನ್ಯ ವಿತರಣೆಯ ವ್ಯವಸ್ಥೆ 30 ದಿವಸಗಳ ಸಾರ್ವತ್ರಿಕ ರಜೆಯ ವೇತನ, ವಾರದ ರಜೆಯ ವೇತನ, ವಿಶೇಷ ಭತ್ಯೆಗಳನ್ನು ಹೆಚ್ಚಿಸುವುದಕ್ಕೆ ಸರ್ಕಾರದವರು ಕ್ರಮಕ್ಕೆಗೊಳ್ಳುವರೇ?

ಇ) ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು? ಇವುಗಳನ್ನು ಭರ್ತಿ ಮಾಡುವುದಕ್ಕೆ ಸರ್ಕಾರದವರು ಕೈಗೊಂಡ ಕ್ರಮಗಳನ್ನು ಸಿಬ್ಬಂದಿ ವರ್ಗದವರಿಗೆ ಮುಂಬಡ್ತಿ ನೀಡುವುದಕ್ಕೆ ಜೇಷ್ಠ ಪದ್ಧತಿಯ ಆಧಾರದ ಮೇಲೆ ನೀಡುವುದಕ್ಕೆ ವ್ಯಂದ ಮತ್ತು ನೇಮಕಾತಿ ನಿಯಮವನ್ನು ಮಾಡಲಾಗಿದೆಯೇ? ಹೊಸ ವ್ಯಂದ ಮತ್ತು ನೇಮಕಾತಿ ನಿಯಮಗಳು ಎಂದಿನಿಂದ ಜಾರಿಗೆ ಬರುವುದು?

ಶ್ರೀ ವಿ. ಸೋಮಣ್ಣ (ಸೆರೆಮನೆ, ಗೃಹರಕ್ಷ ದಳ ಹಾಗೂ ಅಗ್ನಿಶಾಮಕ ಸೇವೆಗಳ ರಾಜ್ಯ ಸಚಿವರು) :-

ಅ) ಬೆಂಗಳೂರು ದಕ್ಷಿಣ, ಬೆಂಗಳೂರು ಉತ್ತರ, ಜಯನಗರ ಮತ್ತು ಹೈಗ್ರೌಂಡ್ಸ್ ಅಗ್ನಿಶಾಮಕ ಠಾಣೆಗಳಿಗೆ ಅನ್ವಯವಾಗುವಂತೆ ಮೂರು ಪಾಳಿ ಪದ್ಧತಿಯನ್ನು ಕಾರ್ಯರೂಪಕ್ಕೆ ತರಲು ಸರ್ಕಾರವು ಆದೇಶ ಸಂಖ್ಯೆ : ಒಇ198 ಕಆಸೇ 91 ದಿನಾಂಕ : 17-3-1993 ರಲ್ಲಿ 120 ಹುದ್ದೆಗಳನ್ನು ಸೃಜಿಸಿ ಮಂಜೂರಾತಿ ನೀಡಿರುತ್ತದೆ. ಆದರಂತೆ ಕರ್ನಾಟಕ ಅಗ್ನಿಶಾಮಕ ಸೇವಾ ಇಲಾಖೆಯ ಮೇಲ್ಕಂಡ ಅಗ್ನಿಶಾಮಕ ಠಾಣೆಗಳಲ್ಲಿ ಮೂರು ಪಾಳಿ ಪದ್ಧತಿಯನ್ನು ದಿನಾಂಕ : 6-6-1994 ರಿಂದ ಕಾರ್ಯ ರೂಪಕ್ಕೆ ತರಲಾಗಿದೆ. 1993-94, 1994-95 ಮತ್ತು 1995-96 ಸಾಲಿನ ವರ್ಷಗಳಲ್ಲಿ ಸಿಬ್ಬಂದಿಯ ಸೃಜನೆಯ ಪ್ರಸ್ತಾವನೆ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಆ) ಪೋಲೀಸ್ ಇಲಾಖೆಯ ಸಿಬ್ಬಂದಿಗೆ ರಾಷ್ಟ್ರೀಯ ಪೋಲೀಸ್ ಆಯೋಗದ ಶಿಫಾರಸ್ಸಿನಂತೆ ಉಚಿತ ಪಡಿತರ ವ್ಯವಸ್ಥೆಯನ್ನು ಕಳೆದ ವರ್ಷ ಜಾರಿಗೆ ತರಲಾಗಿದೆ. ಇದನ್ನು ತಮಗೂ ಅನ್ವಯಿಸಬೇಕೆಂದು ಅಗ್ನಿಶಾಮಕ ದಳದ ಸಿಬ್ಬಂದಿಯವರು ಸರ್ಕಾರವನ್ನು ಕೋರಿದ್ದಾರೆ. ಈ ಪ್ರಸ್ತಾವನೆಯನ್ನು ತಿರಸ್ಕರಿಸಲಾಗಿದೆ.

ಸಾರ್ವತ್ರಿಕ ರಜೆಗಳ ಬದಲಾಗಿ ಅಗ್ನಿಶಾಮಕ ದಳದ ಸಿಬ್ಬಂದಿಗೆ 15 ದಿನಗಳ ವೇತನವನ್ನು ಕೊಡಲಾಗುತ್ತಿದೆ. ಇದು ಪೋಲೀಸ್ ಇಲಾಖೆಗೆ ನೀಡುವ ಮಾದರಿಯಲ್ಲೇ ಇದೆ. ಇತ್ತೀಚೆಗೆ ಪೋಲೀಸ್ ಇಲಾಖೆಗೆ ಈ ವೇತನವನ್ನು 15 ದಿನದಿಂದ 30 ದಿನಗಳಿಗೆ ಏರಿಸಲಾಗಿದೆ. ಆದರಂತೆ ಅಗ್ನಿಶಾಮಕ ದಳದ ಸಿಬ್ಬಂದಿಗೂ ರಜೆ ವೇತನವನ್ನು ಏರಿಸುವ ಶಿಫಾರಸ್ಸನ್ನು ಸರ್ಕಾರವು ಪರಿಶೀಲಿಸಿದೆ ಹಾಗೂ ಈ ಎರಡು ಸೇವೆಗಳಲ್ಲಿರುವ ವ್ಯತ್ಯಾಸದಿಂದ ಇದನ್ನು ಅಗ್ನಿಶಾಮಕ ದಳಕ್ಕೆ ವಿಸ್ತರಿಸುವುದು ಸರಿಯಲ್ಲವೆಂದು ತೀರ್ಮಾನಿಸಿದೆ.

ಅಗ್ನಿಶಾಮಕ ದಳವು ವಾರದ ರಜೆಯನ್ನು ಅನುಭವಿಸದೇ ಕೆಲಸವನ್ನು ಮಾಡುವುದರಿಂದ ಅವರಿಗೆ ಪೋಲೀಸ್ ಇಲಾಖೆಯಂತೆ 14 ರೂ. ಗಳ ದರದಲ್ಲಿ ಹೆಚ್ಚಿನ ಭತ್ಯೆಯನ್ನು ಸಂದಾಯ ಮಾಡಲಾಗುತ್ತಿದೆ. ಇದನ್ನು ಇತ್ತೀಚೆಗೆ ಪೋಲೀಸ್ ಇಲಾಖೆಯಲ್ಲಿ 30 ರೂ.ಗಳಿಗೆ ಏರಿಸಿರುವುದರಿಂದ ಅದನ್ನು ಅಗ್ನಿಶಾಮಕ ದಳದ ಸಿಬ್ಬಂದಿಗೂ ಏರಿಸುವಂತೆ ಪ್ರಸ್ತಾಪವಿದ್ದು, ಅದನ್ನು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗುತ್ತಿದೆ.

ಇ) ಮಂಜೂರಾಗಿರುವ ಒಟ್ಟು ಹುದ್ದೆಗಳ ಸಂಖ್ಯೆ 3494

ಖಾಲಿ ಇರುವ ಒಟ್ಟು ಹುದ್ದೆಗಳ ಸಂಖ್ಯೆ 1309

ಖಾಲಿ ಇರುವ ಹುದ್ದೆಗಳ ಪೈಕಿ 546 ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಅನುಮತಿ ನೀಡಿದೆ. ಅಂತೆಯೇ 218 ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡಿಕೊಳ್ಳಲಾಗಿದೆ. ಉಳಿದ ಹುದ್ದೆಗಳನ್ನು 96-97 ನೇ ಸಾಲಿನಲ್ಲಿ ಭರ್ತಿ ಮಾಡಲು ಕ್ರಮವನ್ನು ಕೈಗೊಳ್ಳಲಾಗುವುದು.

ಇಲಾಖಾ ಸಿಬ್ಬಂದಿಗಳ ಜೇಷ್ಠತೆ ಆಧಾರದ ಮೇಲೆ ಬಡ್ತಿಗಳನ್ನು ನೀಡಲು ಅನುಕೂಲವಾಗುವಂತೆ ಇಲಾಖಾ ವೃಂದ ಮತ್ತು ನೇಮಕಾತಿ ನಿಯಮಾವಳಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಅವುಗಳನ್ನು ಅಮೂಲಾಗ್ರವಾಗಿ ತಿದ್ದುಪಡಿ ಮಾಡುವ ಅವಶ್ಯಕತೆ ಇದ್ದು ಅದಕ್ಕಾಗಿ ಸರ್ಕಾರದ ಉನ್ನತ ಮಟ್ಟದಲ್ಲಿ 6 ಸಭೆಗಳು ಜರುಗಿದ್ದು ತಿದ್ದುಪಡಿಯು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.